ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಅಂತಾರಾಷ್ಟ್ರೀಯ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 26/09/2019

# ಡೊನಾಲ್ಡ್ ಟ್ರಂಪ್‌ಗೆ ವಾಗ್ದಂಡನೆ ಭೀತಿ

## ರಾಜಕೀಯ ವೈರಿ ಬೈಡೆನ್‌ಗೆ ಕಳಂಕ ಮೆತ್ತಲು ಉಕ್ರೇನ್ ಅಧ್ಯಕ್ಷರ ನೆರವು ಕೇಳಿದ ಪ್ರಕರಣ ಕೆಳಮನೆಯಲ್ಲಿ ವಾಗ್ದಂಡನೆ ಪ್ರಕ್ರಿಯೆ ಶುರು | ವಾಗ್ದಂಡನೆ ಆದರೆ ಅಮೆರಿಕದ 3ನೇ ಅಧ್ಯಕ್ಷ

**ನ್ಯೂಯಾರ್ಕ್:** 2020ರ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸಲು ಸಿದ್ಧತೆ ನಡೆಸುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ದೊಡ್ಡ ಸಂಕಷ್ಟವೊಂದು ಎದುರಾಗಿದೆ. ಮುಂದಿನ ಅಧ್ಯಕ್ಷ ಚುನಾವಣೆಯಲ್ಲಿ ತಮ್ಮ ವಿರುದ್ಧ ಡೆಮಾಕ್ರೆಟ್ ಪಕ್ಷದ ಸಂಭಾವ್ಯ ಅಧ್ಯಕ್ಷೀಯ ಅಭ್ಯರ್ಥಿ ಜೋ ಬೈಡೆನ್‌ಗೆ ಕಳಂಕ ಹಚ್ಚಲು ಟ್ರಂಪ್ ವಿದೇಶಿ ನೆರವು ಕೋರಿದ್ದರು ಎಂಬ ಗಂಭೀರ ಆರೋಪ ಕೇಳಿಬಂದಿದ್ದು, ಈ ಸಂಬಂಧ ವಾಗ್ದಂಡನೆ ತನಿಖೆಗೆ ಅಮೆರಿಕದ ಜನಪ್ರತಿನಿಧಿ ಸಭೆಯ ಸ್ಪೀಕರ್ ನ್ಯಾನ್ಸಿ ಪೆಲೋಸಿ ಸೂಚನೆ ನೀಡಿದ್ದಾರೆ.



### ಏನಿದು ಪ್ರಕರಣ?

- ಟ್ರಂಪ್, ಉಕ್ರೇನ್ ಅಧ್ಯಕ್ಷ ಝಿಲೆನ್‌ಸ್ಕಿ ಸಂಭಾಷಣೆ ಎನ್ನಲಾದ ಆಡಿಯೋ ಬಿಡುಗಡೆ
- ತಮ್ಮ ಎದುರಾಳಿ ಬೈಡೆನ್ ಪುತ್ರನ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಲು ಕೋರಿಕೆ
- ಉಕ್ರೇನ್‌ನ ಬುರಿಸ್ಮಾ ಎಂಬ ಕಂಪನಿಯ ಮಂಡಳಿ ಸದಸ್ಯನಾಗಿರುವ ಬೈಡೆನ್ ಪುತ್ರ
- ಈ ಕರೆಗೆ ಮುನ್ನ ಉಕ್ರೇನ್‌ಗೆ 4000 ಕೋಟಿ ಡಾಲರ್ ನೆರವು ತಡೆ ಹಿಡಿದಿದ್ದ ಟ್ರಂಪ್
- ಬೆದರಿಕೆ ತಂತ್ರದ ಮೂಲಕ ಬೈಡೆನ್‌ಗೆ ಕಳಂಕ ಹಚ್ಚಲು ಯತ್ನ: ಡೆಮಾಕ್ರೆಟ್ ಪಕ್ಷ ಆರೋಪ

ಈ ಆರೋಪವನ್ನು ಟ್ರಂಪ್ ಸ್ಪಷ್ಟವಾಗಿ ತಳ್ಳಿಹಾಕಿರುವರಾದರೂ, ಇದು ಅವರ ಅಧ್ಯಕ್ಷೀಯ ಅವಧಿಯಲ್ಲಿ ದೊಡ್ಡ ಕಪ್ಪುಚುಕ್ಕೆಯಾಗುವ ಎಲ್ಲಾ ಸಾಧ್ಯತೆಗಳೂ ಇವೆ. ಜೊತೆಗೆ ಒಂದು ವೇಳೆ ಟ್ರಂಪ್ ವಿರುದ್ಧ ವಾಗ್ದಂಡನೆ ವಿಧಿಸಿದ್ದೇ ಆದಲ್ಲಿ ಇಂಥ ಅವಮಾನಕ್ಕೆ ಗುರಿಯಾದ ಅಮೆರಿಕದ ಮೂರನೇ ಅಧ್ಯಕ್ಷ ಎನ್ನಿಸಿಕೊಳ್ಳಲಿದ್ದಾರೆ.

**ಏನೀ ಪ್ರಕರಣ?:** ಕಳೆದ ಜು.25ರಂದು ಅಮೆರಿಕ ಅಧ್ಯಕ್ಷ ಟ್ರಂಪ್ ಹಾಗೂ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝಿಲೆನ್‌ಸ್ಕಿ ಅವರು ನಡೆಸಿದ್ದಾರೆ ಎನ್ನಲಾದ ಫೋನ್ ಸಂಭಾಷಣೆಯೊಂದು ಬಿಡುಗಡೆಯಾಗಿದೆ. ಅದರಲ್ಲಿ ಟ್ರಂಪ್ ಅವರು ಉಕ್ರೇನ್ ಅಧ್ಯಕ್ಷ ವೊಲೊಮಿರ್ ಜೆಲೆನ್‌ಸ್ಕಿ ಅವರನ್ನುದ್ದೇಶಿಸಿ, ಅಮೆರಿಕವು ಎಂದೆಂದಿಗೂ ಉಕ್ರೇನ್‌ಗೆ ಅತ್ಯುತ್ತಮ ರಾಷ್ಟ್ರವಾಗಿದೆ. ↘ 5

# ಟ್ರಂಪ್‌ಗೆ ವಾಗ್ದಂಡನೆ ಭೀತಿ

◀ ಮೊದಲ ಪುಟದಿಂದ

ನೀವೀಗ ನಮಗೊಂದು ಸಹಾಯ ಮಾಡಬೇಕಿದೆ. ಇದರಿಂದ ನಿಮಗೂ ಅನುಕೂಲವಾಗಲಿದೆ ಎಂದು ಟ್ರಂಪ್ ಹೇಳುತ್ತಾರೆ. ಅಲ್ಲದೆ ಟೆಲಿಫೋನ್ ಸಂಭಾಷಣೆ ವೇಳೆ, ಬೈಡನ್ ಅವರ ಪುತ್ರ ಹಂಟರ್ ಬೈಡನ್ ಉಕ್ರೇನ್‌ನ ಬುರಿಸ್ಮಾ ಎಂಬ ಕಂಪನಿಯ ಮಂಡಳಿ ಸದಸ್ಯರಾಗಿದ್ದು, ಅವರ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸುವಂತೆ ಟ್ರಂಪ್ ಉಕ್ರೇನ್ ಅಧ್ಯಕ್ಷರಿಗೆ ಆಮಿಷವೊಡ್ಡಿದ್ದಾರೆ.

ಈ ಕರೆ ಮಾಡುವುದಕ್ಕೂ ಕೆಲವೇ ದಿನ ಮೊದಲು ಉಕ್ರೇನ್‌ಗೆ ಘೋಷಿಸಿದ್ದ 40 ಶತಕೋಟಿ ಡಾಲರ್ ಮೊತ್ತದ ಮಿಲಿಟರಿ ನೆರವನ್ನೂ ತಡೆಹಿಡಿಯುವಂತೆ ಟ್ರಂಪ್ ಸೂಚಿಸಿದ್ದರು. ಈ ಎಲ್ಲಾ ವಿಷಯಗಳು ಬೆದರಿಕೆ ತಂತ್ರದ ಮೂಲಕ ಬೈಡನ್ ಅವರಿಗೆ ಕಳಂಕ ಹಚ್ಚಲು ಟ್ರಂಪ್ ಮಾಡಿದ ಯತ್ನವಾಗಿದೆ. ಇದಕ್ಕಾಗಿ ಅವರು ವಿದೇಶವೊಂದರ ನೆರವು ಯಾಚಿಸಿದ್ದು, ಇದು ದೇಶದ್ರೋಹ, ವಂಚನೆ, ಲಂಚ ಮತ್ತು ಇತರೆ ಗಂಭೀರ ಪ್ರಕರಣಗಳ ವ್ಯಾಪ್ತಿಗೆ ಬರುತ್ತದೆ ಎಂಬುದು ಡೆಮಾಕ್ರೆಟ್ ಸಂಸದರ ವಾದ.

**ಸ್ಪೀಕರ್ ಹೇಳಿದ್ದೇನು?:** ಡೆಮಾಕ್ರೆಟ್ ಸಂಸದರ ಜೊತೆಗಿನ ಸಭೆ ಬಳಿಕ ಮಾತನಾಡಿದ ಅಮೆರಿಕದ ಸಂಸತ್ತಿನ ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರು, ಟ್ರಂಪ್ ಅವರು ತಮ್ಮ ಚುನಾವಣೆ ಲಾಭಕ್ಕಾಗಿ ವಿದೇಶಿ ನೆರವು ಕೋರಿದ್ದಾರೆ. ಈ ಮೂಲಕ ರಾಷ್ಟ್ರೀಯ ಭದ್ರತೆ ಹಾಗೂ ಅಮೆರಿಕ ಸಂವಿಧಾನದತ್ತವಾಗಿ ಬಂದ ಜವಾಬ್ದಾರಿಗಳನ್ನು ಉಲ್ಲಂಘಿಸಿದ್ದಾರೆ. ಟ್ರಂಪ್ ಕಾನೂನಿಗಿಂತ ದೊಡ್ಡವರೇನಲ್ಲ, ಇದಕ್ಕೆ ಟ್ರಂಪ್ ಅವರೇ ಜವಾಬ್ದಾರರು ಎಂದು ಕಿಡಿಕಾರಿದ್ದಾರೆ.

**ವಾಗ್ದಂಡನೆ ಸಾಧ್ಯತೆ ಕಡಿಮೆ:** ಜನಪ್ರತಿನಿಧಿ ಸಭೆಯಲ್ಲಿ ವಿಪಕ್ಷ ಡೆಮಾಕ್ರೆಟ್ ಬಹುಮತ ಹೊಂದಿದೆ. ಹೀಗಾಗಿ ಅಲ್ಲಿಂದ ತನಿಖೆಗೆ ಪ್ರಸ್ತಾಪ ಮಂಡನೆಯಾಗಿ, ಅದು ಸೆನೆಟ್‌ಗೆ ಹೋಗುವ ಎಲ್ಲಾ ಅವಕಾಶ ಇದ್ದೇ ಇದೆ. ಆದರೆ ಸೆನೆಟ್‌ನಲ್ಲಿ ಪ್ರಸ್ತಾಪ ಸೋಲಿಸಲು ಬೇಕಾದ ಮೂರನೇ ಎರಡು ಬಹುಮತ ಟ್ರಂಪ್ ಅವರ ರಿಪಬ್ಲಿಕ್ ಪಕ್ಷಕ್ಕಿದೆ. ಹೀಗಾಗಿ ಪ್ರಸ್ತಾಪಕ್ಕೆ ಅಲ್ಲಿ ಸೋಲಾಗುವ ಎಲ್ಲಾ ಸಾಧ್ಯತೆ ನಿಚ್ಚಳವಾಗಿದೆ.

**ಟ್ರಂಪ್ ಪ್ರತಿಕ್ರಿಯೆ:** ಈ ಬೆಳವಣಿಗೆ ಬಗ್ಗೆ ಟ್ವೀಟರ್ ಮೂಲಕ ಆಕ್ರೋಶ ವ್ಯಕ್ತಪಡಿಸಿರುವ ಟ್ರಂಪ್, ವಿಶ್ವಸಂಸ್ಥೆಯಲ್ಲಿ ಇದೊಂದು ಮಹತ್ವಪೂರ್ಣ ದಿನ. ಆದರೆ, ನನ್ನ ವಿರುದ್ಧ ಇಲ್ಲ ಸಲ್ಲದ ಸುಳ್ಳಿನ ಕಂತೆಯ ಮೂಲಕ ನನ್ನ ಹೆಸರು ಹಾಳು ಮಾಡಲು ಡೆಮಾಕ್ರೆಟ್ ಯತ್ನಿಸುತ್ತಿದೆ. ಇದು ನಿಜಕ್ಕೂ ದೇಶಕ್ಕೆ ಕೆಟ್ಟ ಘಳಿಗೆ ಎಂದು ಹೇಳಿದ್ದಾರೆ.

### ಇತಿಹಾಸದಲ್ಲಿ ಇಬ್ಬರಿಗೆ ವಾಗ್ದಂಡನೆ

ಅಮೆರಿಕದ ಇತಿಹಾಸದಲ್ಲಿ ಇಬ್ಬರು ಅಧ್ಯಕ್ಷರಿಗೆ ಮಾತ್ರವೇ ವಾಗ್ದಂಡನೆ ವಿಧಿಸಲಾಗಿದೆ. ಅದು 1868ರಲ್ಲಿ ಆ್ಯಂಡ್ರೂ ಜಾನ್ಸನ್ ಮತ್ತು 1990ರಲ್ಲಿ ಬಿಲ್ ಕ್ಲಿಂಟನ್‌ಗೆ. ಆದರೆ ಇಬ್ಬರನ್ನೂ ಸೆನೆಟ್ ಅಧ್ಯಕ್ಷ ಸ್ಥಾನದಿಂದ ಕೆಳಗೆ ಇಳಿಸಿರಲಿಲ್ಲ.

### ವಾಗ್ದಂಡನೆ ಪ್ರಕ್ರಿಯೆ ಹೇಗೆ?

- ದೇಶದ್ರೋಹ, ಲಂಚ ಅಥವಾ ಇತರೆ ಗಂಭೀರ ಆರೋಪಗಳ ಹಿನ್ನೆಲೆಯಲ್ಲಿ ಯಾವುದೇ ಸಂಸದ ಜನಪ್ರತಿನಿಧಿ ಸಭೆಯಲ್ಲಿ ವಿಚಾರಣೆಗೆ ಪ್ರಸ್ತಾಪ ಮಾಡಬಹುದು.
- ಜನಪ್ರತಿನಿಧಿ ಸಭೆಯು ಆರೋಪವು ವಿಚಾರಣೆಗೆ ಅರ್ಹ ಎಂದು ಶೇ.51ರಷ್ಟು ಮತಗಳಿಂದ ನಿರ್ಧರಿಸಿದರೆ, ಪ್ರಕರಣವು ತನಿಖೆಗಾಗಿ ಸೆನೆಟ್‌ಗೆ ವರ್ಗ ಆಗುತ್ತದೆ
- ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಸಮಿತಿಯಿಂದ ಅಧ್ಯಕ್ಷರ ವಿಚಾರಣೆ ನಡೆಯುತ್ತದೆ, ಅಧ್ಯಕ್ಷರಿಗೆ ವಕೀಲರ ನೇಮಕ ಅವಕಾಶ ಇರುತ್ತದೆ
- ವಿಚಾರಣೆ ಬಳಿಕ ಅಂತಿಮವಾಗಿ ಸೆನೆಟ್ ಸದಸ್ಯರು ಮತದಾನ ಮಾಡುತ್ತಾರೆ. ಮೂರನೇ ಎರಡರಷ್ಟು ಸದಸ್ಯರು ಒಪ್ಪಿದರೆ ಮಾತ್ರ ವಾಗ್ದಂಡನೆ ವಿಧಿಸಬಹುದು.

18